ಎಂದು ತನ್ನ ಬಗ್ಗೆಯೇ ಸಿಟ್ಟಾಗುತ್ತಾ ವಿನುತಾ ಮತ್ತಷ್ಟು ಚಡಪಡಿಸಿದಳು. ವಿನುತಾ ಮಾತಾಡದೇ ತುಸು ಬಿಗಿದ ಮುಖದಲ್ಲಿ ಕೂತಿದ್ದು ಕಂಡ ರಮೇಶನೂ ಮಾತಾಡುವ ಗೋಜಿಗೆ ಹೋಗದೇ ಸುಮ್ಮನುಳಿದ.

ಮಧ್ಯಾಹ್ನ ವಿನುತಾಳಿಗೆ ಮೇಗಲೆಯ ಮೆಸೇಜ್. 'ಬೆಳಗ್ಗೆಯೇ ಡಿಸ್ಟರ್ಬ್ ಮಾಡಿದ್ದಕ್ಕೆ ಸಾರಿ ಕಣೆ...' 'ಛೇ... ಪರವಾಗಿಲ್ಲ ಕಣೇ. ಆಫೀಸಿಗೆ ಬಂದ್ಯಾ' ಎಂದು ಮಾರುತ್ತರಿಸಿದಳು. 'ಯೆಸ್' ಎಂದಷ್ಟೇ ಮೇಗಲೆ ಚುಟುಕಾಗಿ ಉತ್ತರಿಸಿದ್ದಳು.

ಅಂದು ರಾಜೋ ಮನೆಯಿಂದ ಕೆಲಸ ಮಾಡುತ್ತಿದ್ದಳು. ಅವಳ ಟೀಮಿನವರು ಬರುವುದು ನಾಳೆ. ಆಫೀಸಿನ ಗೂಗಲ್ ಕ್ಯಾಲೆಂಡರ್ ತೆರೆದು ನೋಡಿದಳು. ಮಧ್ಯಾಹ್ನದವರೆಗೆ ಅದೇನೋ ಮೀಟಿಂಗಿನಲ್ಲಿ ಅವಳು ಬಿಜಿಯಾಗಿದ್ದಾಳೆ ಎಂದು ಕ್ಯಾಲೆಂಡರ್ ತೋರಿಸಿತು. ಅವಳಿಗೆ ಫೋನ್ ಮಾಡಿ ಹೇಳಿಕೊಳ್ಳುವಂತೆಯೂ ಇಲ್ಲ. ಸಂಜೆ ಮೇಗಲೆಯ ಆಫೀಸಿಗೆ ಹೋಗಿ ಭೇಟಿಯಾಗಲೇ... ಅರೆ... ಯಾಕಾಗಬಾರದು... ರೆಸಿಡೆನ್ಸಿ ರಸ್ತೆಯಲ್ಲಿ ಹೊಸ ಆಫೀಸ್ ಎಂದಿದ್ದಳಲ್ಲ... ತುಂಬ ದೂರವೇನಲ್ಲ... ನಾಲ್ಕೂವರೆ ಸುಮಾರಿಗೆ ಇಲ್ಲಿಂದ ಹೊರಟೇಬಿಡಣ ಎಂದು ನಿರ್ಧರಿಸಿದ ಮೇಲೆ ಮನಸ್ಸು ಸ್ವಲ್ಪ ಹಗುರಾಯಿತು. ಅವಳಿಗೆ ಹೇಳದೇ ಹೋಗಣ ಎಂದುಕೊಂಡು ಆಫೀಸಿನ ಹೆಸರನ್ನು ಗೂಗಲಿಸಿ ನೋಡಿ, ವಿಳಾಸ ಬರೆದುಕೊಂಡಳು. ಅವಳನ್ನು ಭೇಟಿಯಾಗಿ ಮನೆಗೆ ಹೋಗುವುದು ತಡವಾದರೆ ಎಂದುಕೊಂಡು, ವಾಶ್‌ರೂಮಿಗೆ ಹೋಗಿ ಪ್ಯಾಡ್ ಬದಲಿಸಿ, ಬಿಸಿನೀರಿನೊಂದಿಗೆ ಅರ್ಧ ಹೊಟ್ಟೆನೋವಿನ ಮಾತ್ರೆಯನ್ನೂ ನುಂಗಿ ಹೊರಟಳು. ಸಂಜೆ ಮನೆಗೆ ಬರುವುದು ತಡವಾಗುತ್ತೆ, ರೆಸಿಡೆನ್ಸಿ ರಸ್ತೆಯಲ್ಲಿರೋ ಮೇಗಲೆಯ ಆಫೀಸ್ ಕಡೆಗೆ ಹೋಗ್ತಿದ್ದೀನಿ ಎಂದು ರಮೇಶನಿಗೆ ಮೆಸೇಜಿಸಿದಳು. ಆಟೋದಲ್ಲಿ ಕುಳಿತು ರೆಸಿಡೆನ್ಸಿ ರಸ್ತೆಯತ್ತ ಹೋಗುವಾಗಲೂ ಮೇಗಲೆಗೆ ಹೇಗೆ ಸಮಾಧಾನ ಹೇಳುವುದು ಎಂದೇ ಯೋಚಿಸುತ್ತಿದ್ದಳು. ಅವಳ ಆಫೀಸ್ ತಲುಪಿದ ಮೇಲೆ 'ಕೆಳಗಿದ್ದೇನೆ, ಬಾ' ಎಂದು ಮೆಸೇಜಿಸಿ ಕಾಯುತ್ತಾ ನಿಂತಳು.

'ಅಬ್ಬಾ... ಇದಪ್ಪ ಪ್ಲಸೆಂಟ್ ಸರ್ ಪ್ರೈಸ್ ಎಂದರೆ...' ಎಂದು ನಗುತ್ತಲೇ ಬಂದವಳು ಹಗುರಾಗಿ ಅಪ್ಪಿದಳು. 'ಐದು ನಿಮಿಷ ಕೆಲಸ ಇದೆ, ಮುಗಿಸಿಬಿಡ್ತೀನಿ... ಬಾ ನೀನೂ ಮೇಲೆ... ಅಲ್ಲೇ ಕೂತುಕೋಬಹುದು' ಎಂದು ತನ್ನ ಕ್ಯಾಬಿನ್ ಕಡೆಗೆ ಕರೆದೊಯ್ದಳು. ಎದುರು ಸಿಕ್ಕ ಒಂದಿಬ್ಬರು ಸಹೋದ್ಯೋಗಿಗಳಿಗೆ ನನ್ನ ಹಳೇ ಕಲೀಗ್ ಎಂದು ಅಭಿಮಾನದಿಂದ ಪರಿಚಯಿಸಿದಳು. ಬೆಳಗ್ಗೆ ಅಷ್ಟೆಲ್ಲ ಕರೆಕರೆ ಮಾಡಿದ ಮೇಗಲೆ ಇವಳಲ್ಲವೇನೋ ಎಂಬಂತೆ ಖುಷಿಯನ್ನು ತೋರಿಸಿಕೊಂಡಳು. 'ಐದೇ ನಿಮಿಷ ಕಣೆ' ಎಂದವಳೇ ಚಕಚಕನೆ ಅರ್ಧಕ್ಕೆ ಬಿಟ್ಟಿದ್ದ ಅದೇನೋ ಕೆಲಸವನ್ನು ಮುಗಿಸಿದಳು. 'ಈ ಟೈಮಲ್ಲಿ ಮೇಲೆ ಪ್ಯಾಂಟ್ರಿಯಲ್ಲಿ ಯಾರೂ ಇರೋದಿಲ್ಲ. ಅಲ್ಲೇ ಕೂರಣ್ವಾ ಅಥವಾ ಕೆಳಗೆ ಎಲ್ಲಾದ್ರೂ ಹೋಗೋಣ್ವಾ?' ಕೇಳಿದ ಮೇಗಲೆ, ವಿನುತಾ ಉತ್ತರಿಸೋದಕ್ಕಿಂತ ಮೊದಲೇ, ತಾನೇ ಮತ್ತೆ, 'ಬೇಡ, ಕೆಳಗೇ ಎಲ್ಲಾದ್ರೂ ಹೋಗಣ ಬಾ'ಎಂದಳು. ರಸ್ತೆಯಲ್ಲಿ ಒಂದು ಮಾರು ಮುಂದೆ ಬಂದ ನಂತರ, 'ಇಲ್ಲೊಂದು ಚಾಯ್ ಪಾಯಿಂಟ್ ಅಂತ ಇದೆ, ಒಳಗೆ ಕೂರಕ್ಕೆ ಜಾಗ ಇದೆ, ಅಲ್ಲಿಗೇ ಹೋಗಣ ಬಾ' ಎಂದು ಕರೆದೊಯ್ದಳು. ಮೂಲೆಯನ್ನು ಆರಿಸಿಕೊಂಡು, ಎರಡು ಮಸಾಲಾ ಟೀಗೆ ಆರ್ಡರ್ ಮಾಡಿದಳು. 'ಏನಿದು... ಹೀಗೆ ಇದ್ದಕ್ಕಿದ್ದಂತೆ ಈ ಪಾಮರಳನ್ನು ನೋಡಲು ಇಲ್ಲಿಯವರೆಗೆ ಪಾದ ಬೆಳೆಸಿದ್ದು ತಾವು?' ಮೇಗಲೆ ನಾಟಕೀಯವಾಗಿ ಕೇಳಿದಳು. ಇದೆಲ್ಲವೂ ಅವಳು ತನ್ನಾಳದ ಒಳನಡುಕವನ್ನು ಮುಚ್ಚಿಡುವ ಪ್ರಯತ್ನಗಳು ಎಂಬುದು ವಿನುತಾಳಿಗೂ ಅರಿವಾಗಿತ್ತು. 'ಈ ಬಡವಿಯು ಬೆಳ್ಳಂಬೆಳಗ್ಗೆ ತಮ್ಮ ಮೇಲೆ ರೇಗಿದರಲ್ಲ, ಅದಕ್ಕೆ ತಪ್ಪೊಪ್ಪಿಕೊಳ್ಳಲು ಆಗಮಿಸಿದ್ದಾರೆ' ಬೆಳಗಿನ ಬಗ್ಗಡವನ್ನು ತಿಳಿಗೊಳಿಸಿ ಬಿಡುವುದು ಉತ್ತಮ ಎಂದುಕೊಂಡ ವಿನುತಳೂ ಅಷ್ಟೇ ನಾಟಕೀಯವಾಗಿ ಹೇಳಲು ಪ್ರಯತ್ನಿಸಿದಳು. ಮತ್ತೆ ಮರುಕ್ಷಣದಲ್ಲಿ ಇಬ್ಬರೂ ಜೋರಾಗಿ ನಕ್ಕರು. ನಗು ನಿಂತೊಡನೆ ಇಬ್ಬರ ನಡುವೆ ಕ್ಷಣಕಾಲ ಹಬ್ಬಿದ ಮೌನ. ವಿನುತಾ ಮೇಗಲೆಯನ್ನೇ ದಿಟ್ಟಿಸಿದಳು. ಕಣ್ಣಿನ ಕೆಳಗಿನ ಕಪ್ಪು ಉಂಗುರ ಈ ಮೊದಲಿಗಿಂತ ಗಾಢವಾಗಿದ್ದಂತೆ ಅನ್ನಿಸಿತು. ಅಲ್ಲಲ್ಲಿ ತುಸು ಹೆಚ್ಚೇ ಬಿಳಿಯಾಗಿ ಕಾಣುತ್ತಿದ್ದ ಕೂದಲು... ಬಹುಶಃ ಹೇರ್ ಡೈ ಕೂಡ ಮಾಡದೇ ಮೂರು ನಾಕು ವಾರವಾಗಿತ್ತೇನೋ... ಕುಳಿತ ಭಾವ ಭಂಗಿ ಯಾವುದರಲ್ಲಿಯೂ